**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವೆ ನಂ. **777/2022**
ಪಿ.ಡಬ್ಲ್ಯೂ:**-1**

**ದಿನಾಂಕಃ 28.07.2026: ಸಾಕ್ಷಿಯನ್ನು ಕರೆಯಿಸಿ ಪ್ರಮಾಣಕರಿಸಲಾಯಿತು :**

**ಪಾಟೀ ಸವಾಲುಃ ಪ್ರತಿವಾದಿ ಪರ S.A.S ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಈ ದಾವೆ ಹೂಡಿದ ನಂತರ ದಾವಾ ಆಸ್ತಿಗೆ 3 ಬಾರಿ ಬೇಟಿ ನೀಡಿದ್ದೇನೆ. ದಾವಾ ಆಸ್ತಿಯನ್ನು ಎಷ್ಟು ಕ್ಷೇತ್ರದಲ್ಲಿ ಯಾವ ಯಾವ ಬೆಳೆ ಇತ್ತು ಎಂದು ಮಾಹಿತಿ ಇದೆ. ಮತ್ತು ಎಷ್ಟು ಕ್ಷೇತ್ರದಲ್ಲಿ ಮನೆ ಮತ್ತು ದೇವಸ್ಥಾನ ಇದೆ ಎಂದು ಮಾಹಿತಿ ಇದೆ. ದಾವಾ ಆಸ್ತಿಯಲ್ಲಿ ಮನೆ ಮತ್ತು ಗುಡಿ ಅಲ್ಲದೇ ದನಕಟ್ಟಿದ ಶೆಡ್ಡ್ ಸಹ ಪ್ರತಿವಾದಿಯರು ನಿರ್ಮಿಸಿಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿಯರ ವಾಸದ ಮನೆ ದಾವಾ ಆಸ್ತಿಗಳಲ್ಲಿ ಎಷ್ಟು ವರ್ಷಗಳಿಂದ ಇದೆ ಎಂಬುದರ ಬಗ್ಗೆ ನಾನು ಚೌಕಶಿ ಮಾಡಿಲ್ಲ. ದಾವಾ ಆಸ್ತಿಗಳಲ್ಲಿ ಎಷ್ಟು ವರ್ಷಗಳಿಂದ ದೇವಸ್ಥಾನ ಇದೆ ಎಂದು ಚೌಕಾಶಿ ಮಾಡಿಲ್ಲ. ದಾವಾ ಆಸ್ತಿಗಳಲ್ಲಿ ಮನೆ, ದೇವಸ್ಥಾನ, ಶೆಡ್ಡ ಗಳಿಗೆ ವಿದ್ಯುತ ಸಂಪರ್ಕ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ದಾವಾ ಆಸ್ತಿಯ ಚಕಬಂದಿ ಹೇಳಲಾಗುವುದಿಲ್ಲ. ದಾವಾ ಆಸ್ತಿಯ ಚಕಬಂದಿಯನ್ನು ವಾದ ಪತ್ರದಲ್ಲಾಗಲೀ, ಮುಖ್ಯ ಪ್ರಮಾಣ ಪತ್ರದಲ್ಲಾಗಲೀ ತೋರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ರೆವಿನ್ಯೂ ಅಧಿಕಾರಿಗಳು ಸರ್ವೆ ಮಾಡಿ ಗಡಿಗುರುತು ಮಾಡಿ ಕಲ್ಲುಗಳನ್ನು ಹಾಕಿರುವ ಬಗ್ಗೆ ಯವುದೇ ಪುರಾವೆ ಇಲ್ಲ ಎಂದರೆ ಸರಿ. ಯಾವ ವರ್ಷದಲ್ಲಿ ಅಥವಾ ಎಷ್ಟು ವರ್ಷಗಳ ಹಿಂದೆ ಸರ್ವೆ ಮಾಡಲಾಗಿತ್ತು ಎಂದು ನೆನಪಿಲ್ಲ. ಸಾಕ್ಷಿ ನೆನಪು ಮಾಡಿಕೊಂಡು ಸುಮಾರು 10ವರ್ಷಗಳ ಹಿಂದೆ ಸರ್ವೆ ಆಗಿತ್ತು ಎಂದು ನುಡಿಯುತ್ತಾರೆ.

ಸದರಿ ಸರ್ವೆ ದಾಖಲಾತಿಗಳನ್ನು ನಾನು ವೈಯಕ್ತಿಕವಾಗಿ ನೋಡಿಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಅಂತ್ಯ ಸಂಸ್ಕಾರ ಆದ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ಯಾವ ಸಮಾಜಕ್ಕೆ ಸ್ಮಶಾನ ಭೂಮಿ ಮಂಜೂರು ಮಾಡಲಾಗಿತ್ತು ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ಸಾಕ್ಷಿ ಮುಂದುವರೆದು ಎಲ್ಲ ಸಮಾಜಕ್ಕೂ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಎಷ್ಟು ಸ್ಮಶಾನ ಭೂಮಿಗಳು ಇದೆ ಎಂದು ಮಾಹಿತಿ ಇಲ್ಲ, ಆ ಕುರಿತು ಮಾಹಿತಿ ಪಡೆಯಲು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಸರ್ಕಾರದಿಂದ ಯಾವ ಯಾವ

ಸಮಾಜಕ್ಕೆ ಎಲ್ಲಿಲ್ಲಿ ಸ್ಮಶಾನ ಭೂಮಿಗಳನ್ನು ಮಂಜೂರು ಮಾಡಲಾಗಿದೆ ಎಂದು ಮಾಹಿತಿ ಪಡೆಯಲು ತೊಂದರೆ ಇಲ್ಲ ಎಂದರೆ ಸರಿ. ದಾವಾ ಆಸ್ತಿ ಎಷ್ಟು ಅಡಿ ಎತ್ತರದಲ್ಲಿದೆ ಎಂದು ಹೇಳಲಾಗುವುದಿಲ್ಲ. ದಾವಾ ಆಸ್ತಿಯಲ್ಲಿ ವಾಟರ ಟ್ಯಾಂಕ ನಿರ್ಮಾಣ ಮಾಡಲು ಸರ್ಕಾರದಿಂದ ಯೋಜನೆ ನಿರ್ಮಿಸಲಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ.

ತಾಲೂಕು ಪಂಚಾಯಿತಿ ಅಧ್ಯಕ್ಷರ ಅವಧಿ 2021-22ರಲ್ಲಿ ಮುಗಿದಿದೆ. ಆ ಅವಧಿಯಲ್ಲಿ ಯಾವುದೇ ಠರಾವು ಮಾಡಿಲ್ಲ ಎಂದರೆ ಸರಿ. ಎಲೆಡೆಟ ಬಾಡಿ ಅವದಿ ಮುಗಿದ ನಂತರ ಯಾವ ದಿನಾಂಕದಂದು ನಮಗೆ ಅಧಿಕಾರ ಹಸ್ತಾಂತರಿಸಲಾಗಿದೆ ಎಂದು ಹೇಳಲಾಗುವುದಿಲ್ಲ. ನಾವು ತಾಲೂಕು ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅಡಿಯಲ್ಲಿ ಮತ್ತು ಅವರ ಜೊತೆಯಲ್ಲಿ ಕೆಲಸ ನಿರ್ವಹಿಸುತ್ತೇವೆ. ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದ ನಂತರ ನಮ್ಮ ವ್ಯಾಪ್ತಿಗೆ ಬರುತ್ತದೆ. ತಾಲೂಕು ಪಂಚಾಯಿತ ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದ ನಂತರ ಅದು ಜಿಲ್ಲಾ ಅಧಿಕಾರ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿಯಲ್ಲ. ತಾಲೂಕು ಪಂಚಾಯಿತ ಚುನಾಯಿತ ಪ್ರತಿನಿಧಿಗಳ ಅವಧಿಯಲ್ಲಿ ಸ್ಮಶಾನ ಭೂಮಿ ಕುರಿತು ಯಾವುದೇ ವ್ಯವಹಾರ ಮಾಡಬೆಕಾದಲ್ಲಿ ಜಿಲ್ಲಾ ಅಧಿಕಾರಿಗಳ ಅನುಮತಿ ಬೇಕಾಗುತ್ತದೆ ಎಂದರೆ ಸರಿ. ಈ ದಾವೆ ಹೂಡುವ ಪೂರ್ದಲ್ಲಿ ನಾವು ಜಿಲ್ಲಾಧಿಕಾರಿಗಳಿಂದ ಯಾವುದೇ ಅನುಮತಿ ಪಡದುಕೊಂಡಿಲ್ಲ. 1 ಮತ್ತು 3ನೇ ಪ್ರತಿವಾದಿಯರು ಈ ದಾವೆ ಹೂಡುವ ಪೂರ್ವದಲ್ಲಿ ನನ್ನ ವಿರುದ್ಧ, ತಹಸೀಲ್ದಾರ ವಿರುದ್ದ , ತಾಲೂಕು ಪಂಚಾಯಿತ ಅದ್ಯಕ್ಷರ ವಿರುದ್ಧ , ಎಡಿಎಲಆರ ವಿರುದ್ದ ಇದೇ ನ್ಯಾಯಾಲಯದಲ್ಲಿ ಇಪಿ ನಂಬರ 91/2021 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾವು ಪ್ರತಿವಾದಿಯರ ಅನಧಿಕೃತವಾಗಿ ದಾವಾ ಆಸ್ತಿಯಿಂದ ಹೊರಹಾಕುವ ಪ್ರಯತ್ನ ಮಾಡಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ಮಾತ್ರ ಮಾಡಿಸಿದ್ದೆವು ಎಂದು ನುಡಿಯುತ್ತಾರೆ.

ವಾದ ಪತ್ರದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಒ.ಎಸ ನಂಬರ 4/2001 ವಜಾ ಆಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿನ ತೀರ್ಪಿನ ವಿರುದ್ದ ಸಲ್ಲಿಸಲಾಗಿದ್ದ ಮೇಲ್ಮನವಿ ಆರ.ಎ ನಂಬರ 254/2008 ರಲ್ಲಿ ಸಿವಿಲ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದು ವಜಾ ಮಾಡಲಾಗಿತ್ತು ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಇಂದಿನ ದಾವೆಯಲ್ಲಿ ನನ್ನ ಇಲಾಖೆಯ ಅಧಿಕಾರಿಗಳಾಗಲೀ, ತಾಲೂಕು ಪಂಚಾಯತ ಪ್ರತಿನಿಧಿಗಳಾಗಲೀ ಯಾವುದೇ ಎದುರು ಹಕ್ಕು ಕೇಳಿಲ್ಲ ಎಂದರೆ ಸರಿ. ಆ ರೀತಿ ಎದುರು ಹಕ್ಕು ತೊಂದರೆ ಇರಲಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ